ಶ್ರೀ ಸಿ. ಬೈರೇಗೌಡ (ಕೃಷಿ ಸಚಿವರು):- ಮಾನ್ಯ ಉಪಾಧ್ಯಕ್ಷರೆ, ಈ ವಿಚಾರವನ್ನು ಮಾನ್ಯ ಕಂದಾಯ ಸಚಿವರ ಗಮನಕ್ಕೆ ತಂದು ಸೂಕ್ತ ಪರಿಹಾರವನ್ನು ಹುಡುಕತಕ್ಕ ವ್ಯವಸ್ಥೆಯನ್ನು ಮಾಡುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ:- ಮಾನ್ಯ ಉಪಾಧ್ಯಕ್ಷರೆ, ಒಂದು ನಿಮಿಷ, ತಮ್ಮ ಬಗ್ಗೆ ನಾವು ಆಸ್ಥಾನದಲ್ಲಿ ಕುಳಿತು ಕೆಲಸ ಮಾಡವಂತಹ ಸಂದರ್ಭದಲ್ಲಿ ನಾವು ಗೌರವ ಕೊಟ್ಟು ಕೆಲಸ ಮಾಡುವಂಥದ್ದನ್ನು ತಾವು ನೋಡುತ್ತಿದ್ದೀರಿ. ತಮ್ಮ ಮಾತಿಗೆ ಇಲ್ಲಿ ಯಾರೂ ಏನು ಬೇರೆ ಮಾತನಾಡುವ ಪ್ರಶ್ನೆಯಿಲ್ಲ. ತಾವು ದಯಮಾಡಿ ಇಲ್ಲಿ ಯಾವುದೇ ಶಾಸಕರು ಯಾವುದೇ ಪ್ರಮುಖವಾದ ವಿಷಯವನ್ನು ಪ್ರಸ್ತಾಪ ಮಾಡಿದರೆ ಏನೋ ಒಂದು ಭಿನ್ನಹ ತಮ್ಮಲ್ಲಿ ಇಟ್ಟುಕೊಳ್ಳುವಂತಹದ್ದು ತಾವು ಪರಿಶೀಲನೆ ಮಾಡುತ್ತೇವೆಂದು ಹೇಳತಕ್ಕದ್ದಲ್ಲ. ಇವತ್ತು ಇಲ್ಲಿ ಮಾನ್ಯ ನಾಣಯ್ಯನವರು ಹಿರಿಯ ಸಚಿವರು ಇದ್ದಾರೆ. ಸಿಂಧ್ಯಾರವರು ಇದ್ದಾರೆ ಮಾನ್ಯ ಸದಸ್ಯರು ಏನು ಹೇಳಿದರು? ಒಬ್ಬ ಶಾಸಕನಾಗಿ ನಾನು ಕೆಲಸ ಮಾಡುವುದಕ್ಕಾಗುತ್ತಿಲ್ಲ. ಅಕ್ರಮ ಸಕ್ರಮ ಸಮಿತಿಯ ಸದಸ್ಯರನ್ನಾಗಿ ಯಾರು ಬೇಕಾದರೂ ಮಾಡಿ ನಿಮಗೆ ಸ್ವಾತಂತ್ರ್ಯವಿದೆ ನಿಮ್ಮ ಸರ್ಕಾರ ಇದೆ, ಆದರೆ ಕಳೆದ ಮೂರು ಮೀಟಿಂಗ್ ಕರೆದಾಗಲೂ ಆ ಮೀಟಿಂಗ್‌ಗೆ ಅವರು ಬರಲಿಲ್ಲ. ಬರದಿರುವುದರಿಂದ ನಾನು ಒಬ್ಬ ಶಾಸಕನಾಗಿ ಈ ಸಮಿತಿಯ ಅಧ್ಯಕ್ಷನಾಗಿ ನಾನು ನನ್ನ ಕೆಲಸವನ್ನು ಮಾಡುವುದಕ್ಕಾಗುತ್ತಿಲ್ಲ. ಒಂದು ಅಪಹಾಸ್ಯಕ್ಕೆ ಈಡಾಗುತ್ತಿದ್ದೇನೆ ಅಂತ ಅವರು ಹೇಳುತ್ತಿದ್ದಾರೆ. ಅವರು ಮುಂದಿನ ಮೀಟಿಂಗ್ ಕರೆಯತ್ತಾರೆ. ಆ ಮೀಟಿಂಗ್‌ಗೆ ಅವರು ಹೋಗುವಂತಹ ವ್ಯವಸ್ಥೆಯನ್ನು ಮಾಡಿ. ಅವರು ಉದ್ದೇಶಪೂರ್ವಕವಾಗಿ ಆ ಮೀಟಿಂಗ್‌ಗೆ ಹೋಗದೆ ನಮ್ಮ ಶಾಸಕರು ಕೆಲಸ ಮಾಡಬಾರದೆನ್ನುವ ಉದ್ದೇಶವಿದ್ದರೆ, ಇವರೇ ರಾಜೀನಾಮೆಯನ್ನು ಕೊಡುತ್ತಾರೆ ಬೇಕಾದರೆ ತೆಗೆದುಕೊಳ್ಳಿ, ಮಾನ್ಯ ಬೈರೇಗೌಡರಾಗಲಿ ಸಿಂಧ್ಯಾರಾಗಲಿ ಸಚಿವರಾಗದೆ ಶಾಸಕರಾಗಿ ಇಲ್ಲಿ ಕುಳಿತಿದ್ದರೆ ತಾವು ಏನು ಮಾಡುತ್ತಿದ್ದಿರಿ? ದಯಮಾಡಿ ಆ ಸ್ಪಿರಿಟ್‌ನಲ್ಲಿ ತೆಗೆದುಕೊಳ್ಳಿ. ಅಲ್ಲಿ ತಾಲ್ಲೂಕಿನ ಕೆಲಸ ಆಗಬೇಕಾಗಿದೆ. ಅವರು ಶಾಸಕರಾಗಿ ತಮ್ಮ ಕರ್ತವ್ಯ ನಿರ್ವಹಿಸಬೇಕಾಗಿದೆ. ದಯಮಾಡಿ ಇದನ್ನು ಸೀರಿಯಸ್ಸಾಗಿ ತೆಗೆದುಕೊಂಡು ಇದರ ಬಗ್ಗೆ ಗಮನಕೊಡಿ.

ಶ್ರೀ. ಸಿ. ಬೈರೇಗೌಡ:- ಮಾನ್ಯ ಉಪಾಧ್ಯಕ್ಷರೆ ಸ್ಥಳದಲ್ಲಿ ಏನು ವಿದ್ಯಾಮಾನ ಇದೆ ಎನ್ನತಕ್ಕದ್ದನ್ನು ತತ್‌ಕ್ಷಣದಲ್ಲಿ ಹೇಳುವುದು ಕಷ್ಟವಿದೆ. ಆದರೆ ಅಲ್ಲಿ ಉದ್ದೇಶಪೂರ್ವಕವಾಗಿ ನಾಮನಿರ್ದೇಶನ ಹೊಂದಿದಂತಹ ಸದಸ್ಯರು ಸಮಿತಿಯಲ್ಲಿ ಕೆಲಸ ಮಾಡದಿದ್ದರೆ ಅಂತಹವರನ್ನು ತೆಗೆಯಬೇಕಾಗಿರತಕ್ಕದ್ದು ಅತ್ಯಾವಶ್ಯಕ. ಅದು ಯಾವುದೇ ಕ್ಷೇತ್ರವಿರಬಹುದು ಅಥವಾ ಯಾವುದೇ ತಾಲ್ಲೂಕು ಆಗಲಿ ಅಭಿವೃದ್ಧಿ ಕಾರ್ಯಕ್ರಮದ ಕೆಲಸಗಳು ಜನರಿಗೆ ಆಗಬೇಕಾಗಿರತಕ್ಕ ಸೌಕರ್ಯ ಅದು ಆಗಬೇಕಾಗುತ್ತದೆ. ಯಾರೇ ಶಾಸಕರು ಇರಲಿ, ಯಾವ ಪಕ್ಷಕ್ಕೆ ಸಂಬಂಧಪಟ್ಟಿರತಕ್ಕವರು ಶಾಸಕರು ಆಗಿರಲಿ ಆಲ್ಲಿ ನಮಗೆ ರಾಜ್ಯದ ಸಮಗ್ರ ಅಭಿವೃದ್ಧಿ ಮುಖ್ಯ. ಈ ಶಾಸಕರು ಆ ಶಾಸಕರು ಆ ಮುಖಂಡರು ಈ

ಮುಖಂಡರು ಆದು ಖಂಡಿತವಾಗಿ ಮುಖ್ಯವಲ್ಲ. ಈ ವಿಚಾರವನ್ನು ನಾನು ಮತ್ತೊಮ್ಮ ಮಾನ್ಯ ಕಂದಾಯ ಸಚಿವರ ಗಮನಕ್ಕೆ ತಂದು ಅದು ಮರುಕಳಿಸದ ರೀತಿಯಲ್ಲಿ ವ್ಯವಸ್ಥೆಯನ್ನು ಮಾಡಲಿಕ್ಕೆ ಸರ್ಕಾರ ಕ್ರಮ ತೆಗೆದುಕೊಳ್ಳುತ್ತದೆ.

ಶ್ರೀ ಕೆ. ಜಯರಾಮಶೆಟ್ಟಿ:- ಅದರಲ್ಲಿ ನಾಲ್ಕು ಜನ ಸದಸ್ಯರು ಭೂಮಾಲೀಕರೆ ಆಗಿದ್ದಾರೆ. ಭೂಮಾಲೀಕರಿಗೆ ಬಡ ಜನರ ಕಷ್ಟ ಅಥವಾ ಅವರಿಗೆ ಭೂ ಒಡೆಯರನ್ನಾಗಿ ಮಾಡುವಂತಹ ಒಂದು ಮಾನವೀಯತೆ ಅವರಲ್ಲಿ ಇದೆಯೋ? ಇವತ್ತು ಆ ಮನೋಭಾವನೆ ಇದ್ದಿದ್ದರೆ ಮೀಟಿಂಗ್‌ಗೆ ಬರುತ್ತಿದ್ದರು. ಆ ಮನೋಭಾವನೆಯಿಲ್ಲದೆ ಇರುವುದರಿಂದ ನಾನು ಮೀಟಿಂಗ್ ಮಾಡುವುದನ್ನು ಹಾಳು ಮಾಡುವುದು ಹೇಗೆ? ಈ ಮೀಟಿಂಗ್ ಕಾರ್ಯರೂಪವಾಗದ ಹಾಗೆ ಮಾಡುವುದು ಹೇಗೆ ಎಂದು ನೋಡುವುದೇ ಅವರ ಮುಖ್ಯ ಪ್ರವೃತ್ತಿಯಾಗಿದೆ.

ಉಪಾಧ್ಯಕ್ಷರು:- ಸದಸ್ಯರು ಸರಿಯಾಗಿ ನಡೆದುಕೊಳ್ಳದಿದ್ದರೆ ಮೀಟಿಂಗ್‌ಗೆ ಬರದಿದ್ದರೆ ಅವರನ್ನು ತೆಗೆಯುತ್ತೇವೆಂಬ ಉತ್ತರವನ್ನು ಮಾನ್ಯ ಮಂತ್ರಿಗಳು ಹೇಳಿದ್ದಾರೆ.

ಶ್ರೀ ಕೆ. ಜಯರಾಮಶೆಟ್ಟಿ:- ಮಾನ್ಯ ಉಪಾಧ್ಯಕ್ಷರೇ, ನಾನು ಈಗ ನಾಲ್ಕನೇ ಮೀಟಿಂಗ್ ಕರೆಯಬೇಕೋ ಬೇಡವೋ ತಾವೇ ಹೇಳಿ? ನಾನು ನಾಲ್ಕನೇ ಮೀಟಿಂಗ್ ಹೇಗೆ ಕರೆಯಲಿ? ಆ ಅಧಿಕಾರಿಗಳಿಗೆ ಮತ್ತು ಆ ಬಡ ಜನರಿಗೆ ನಾನು ಹೇಗೆ ಮುಖ ತೋರಿಸಲಿ? ಅವರಿಗೆ ನಾನು ಏನು ಉತ್ತರ ಕೊಡಲಿ? ನಾಲ್ಕನೇ ಮೀಟಿಂಗ್‌ನ್ನು ಕರೆಯಬೇಕೋ ಬೇಡವೋ ಅಂತ ನಾನು ಕೇಳುತ್ತಿದ್ದೇನೆ. ಮೂರು ಮೀಟಿಂಗ್ ಆಯಿತು, ಮೂರು ಮೀಟಿಂಗ್‌ನಲ್ಲಿ ಕೋರಂ ಇಲ್ಲ.

ಉಪಾಧ್ಯಕ್ಷರು:- ನಾಲ್ಕನೇ ಮೀಟಿಂಗ್ ಕರೆಯಿರಿ.

ಶ್ರೀ ಸಿ. ಬೈರೇಗೌಡ:- ನಾನು ಅದನ್ನು ಹೇಳಿದ್ದೇನೆ, ಉದ್ದೇಶಪೂರ್ವಕವಾಗಿ ಆ ರೀತಿ ನಡೆಯುತ್ತಿದ್ದರೆ, ಅಂತಹವರನ್ನು ತೆಗೆದು ಬೇರೆಯವರನ್ನು ಸದಸ್ಯರನ್ನಾಗಿ ಮಾಡುತ್ತೇವೆ. ಆ ಮಾತನ್ನು ನಾನು ಈಗಾಗಲೇ ಹೇಳಿದ್ದೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ:- ಅದು ಯಾವುದೇ ಕ್ಷೇತ್ರವಾಗಲಿ ನಿಯಮಾವಳಿಗಳ ಪ್ರಕಾರ ಕಂಟಿನ್ಯುಯಸ್ ಆಗಿ ಮೂರು ಮೀಟಿಂಗ್‌ಗೆ ಬರದಿದ್ದರೆ ಅಂತಹವರನ್ನು ತೆಗೆದುಹಾಕಬೇಕಾಗುತ್ತೆ.

ಉಪಾಧ್ಯಕ್ಷರು:- ಅದರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇನೆಂದು ಮಂತ್ರಿಗಳು ಹೇಳಿದ್ದಾರೆ.

ಶ್ರೀ ಬಿ.ಎಸ್. ಯಡಿಯೂರಪ್ಪ:- ನಮ್ಮ ನಿಯಮಾವಳಿಯ ಪ್ರಕಾರ ತೆಗೆದು ಹಾಕಬೇಕಾಗುತ್ತದೆ.

ಶ್ರೀ ಸಿ. ಬೈರೇಗೌಡ:- ನಿಯಮಾವಳಿಯಲ್ಲಿ ಇಲ್ಲದಿದ್ದರೂ ಸಹ ಇದು ಸರ್ಕಾರ ನಾಮ ನಿರ್ದೇಶನ ಮಾಡಿರತಕ್ಕದ್ದು ಅವರನ್ನು ತೆಗೆಯತಕ್ಕ ಅಧಿಕಾರ ಸರ್ಕಾರಕ್ಕೆ ಇದೆ. ಉದ್ದೇಶಪೂರ್ವಕ-ವಾಗಿ ಈ ರೀತಿಯಾಗಿ ಮಾಡಿದ್ದರೆ ಅಂತಹವರನ್ನು ತೆಗೆಯುತ್ತೇವೆ ಎನ್ನತಕ್ಕ ಮಾತನ್ನು ಮತ್ತೊಂದು ಸಾರಿ ಹೇಳಲಿಕ್ಕೆ ಇಷ್ಟಪಡುತ್ತೇನೆ.

ಶ್ರೀ ವಾಟಾಳ್ ನಾಗರಾಜ್:- ಮಾನ್ಯ ಉಪಾಧ್ಯಕ್ಷರೆ, ಈ ನಕಲಿ ಅಂಕಪಟ್ಟಿಯ ಜಾಲ ಇದು ಬಹಳ ದೊಡ್ಡದಾಗಿ ಬೆಳೆಯುತ್ತಿದೆ.

ಉಪಾಧ್ಯಕ್ಷರು:- ಇದಕ್ಕೆ ಸಂಬಂಧಪಟ್ಟ ಮಂತ್ರಿಗಳು ಇಲ್ಲ ನಾಳೆ ಪ್ರಸ್ತಾಪ ಮಾಡಿ. ಈಗ ಮಾನ್ಯ ಬಾಲಕೃಷ್ಣರವರು ಸಾರಿಗೆ ಮಂತ್ರಿಗಳಲ್ಲಿ ಒಂದು ವಿಚಾರ ಪ್ರಸ್ತಾಪ ಮಾಡಿದ್ದಾರೆ ಅದರ ಬಗ್ಗೆ ಮಂತ್ರಿಗಳ ಗಮನ ಸೆಳೆಯಲಿ.

(ಬ) ಮಾಗಡಿಯಲ್ಲಿ ಬಸ್ಸುಗಳ ಸೌಕರ್ಯ ಕುರಿತು.

+ ಶ್ರೀ ಬಿ.ಎಸ್. ಯಡಿಯೂರಪ್ಪ (ವಿರೋಧ ಪಕ್ಷದ ನಾಯಕರು):- ಮಾನ್ಯ ಬಾಲಕೃಷ್ಣ ರವರ ಪ್ರಶ್ನೆ ಇಷ್ಟೆ, ಮಾಗಡಿ–ಬೆಂಗಳೂರು ಪ್ರೈವೇಟ್ ಬಸ್‌ನವರು ಏಳೂವರೆ ರೂಪಾಯಿ ಇದ್ದದನ್ನು ಈಗ ಹನ್ನೊಂದು ರೂಪಾಯಿ ಮಾಡಿದ್ದಾರೆ. ಒಂದು ಒಂದೂವರೆ ರೂಪಾಯಿ ಜಾಸ್ತಿ ಮಾಡಿದರೆ ಅವರದೇನು ಆಭ್ಯಂತರವಿಲ್ಲ. ತಮಗೆ ಗೊತ್ತಿದೆ ಅಲ್ಲಿಂದ ಇಲ್ಲಿಗೆ ಒಂದು ಹದಿನೈದು ಲೀಟರ್ ಡೀಸಲ್ ಜಾಸ್ತಿಯಾಗಬಹುದು. ಒಂದು ರೂಪಾಯಿ ಜಾಸ್ತಿ ಮಾಡಿದರೂ ಅವನು ಲಾಭದಾಯಕ-ವಾಗಿ ಬಸ್ ನಡೆಸಬಹುದು. ಇವತ್ತು ಏಳೂವರೆ ರೂಪಾಯಿಗಳಿಂದ ಹನ್ನೊಂದು ರೂಪಾಯಿ ಮಾಡಿದ್ದಾರೆ. ಇವತ್ತಿನ ಪರಿಸ್ಥಿತಿನಲ್ಲಿ ಜನರು ಹೇಗೆ ಅದನ್ನು ಭರಿಸಲಿಕ್ಕೆ ಸಾಧ್ಯವಿದೆ? ಅದಕ್ಕೋಸ್ಕರ ಅವರು ಪ್ರೊಟೆಸ್ಟ್ ಮಾಡಿದರು. ತಾವು ಸಹ ಆಲ್ಟರ್‌ನೇಟಿವ್ ಆಗಿ ಕೆಎಸ್‌ಆರ್‌ಟಿಸಿ ಬಸ್ಸುಗಳನ್ನು ಬಿಟ್ಟಿದ್ದಿರಿ, ಯಾವ ಕಾರಣಕ್ಕೊ ಅವುಗಳನ್ನು ನಿಲ್ಲಿಸಿದ್ದೀರಿ. ಮಾತುಕತೆ ಮಾಡಿ ಇವತ್ತೆ ಏಳೂವರೆ ಇದ್ದರೆ ಅದನ್ನು ಎಂಟು ಅಥವಾ ಎಂಟೂವರೆ ಮಾಡಿ ಬಸ್ ಓಡಿಸುವ ವ್ಯವಸ್ಥೆ ಮಾಡಿಸಿ, ಇಲ್ಲ-ವೆಂದರೆ ಖಾಸಗಿ ಬಸ್ ಮಾಲೀಕರು ಕಿರುಕುಳ ಕೊಡುವಂತಹ ಸಂರ್ಭದಲ್ಲಿ ಆಲ್ಟರ್‌ನೆಟಿವ್ ವ್ಯವಸ್ಥೆ ಮಾಡಿ ಅವರಿಗೆ ಬುದ್ಧಿ ಕಲಿಸುವಂತಹ ವ್ಯವಸ್ಥೆಯನ್ನಾದರೂ ಮಾಡಬೇಕೆಂದು ಮಾನ್ಯ ಸದಸ್ಯರ ಒತ್ತಾಯ. ಇದರ ಬಗ್ಗೆ ಮಾನ್ಯಮಂತ್ರಿಗಳು ಉತ್ತರ ಕೊಡಲಿ.

ಉಪಾಧ್ಯಕ್ಷರು:- ಈಗ ಉತ್ತರ ಬೇಡ, ಡಿಮ್ಯಾಂಡ್ ಮೇಲೆ ಉತ್ತರ ಕೊಡುತ್ತಾರೆ.

ಶ್ರೀ ಬಿ. ಎಸ್. ಯಡಿಯೂರಪ್ಪ:- ಒಂದು ನಿಮಿಷ. ಉಪಾಧ್ಯಕ್ಷರಿಗೆ ನಮ್ಮ ಮೇಲೆ ಕರುಣೆ ಇಲ್ಲವೇನು?

ಶ್ರೀ ಪಿ.ಜಿ.ಆರ್. ಸಿಂಧ್ಯ (ಸಾರಿಗೆ ಸಚಿವರು):- ಮಾಗಡಿಯಿಂದ ಬೆಂಗಳೂರಿಗೆ, ಗ್ರಾಮಾಂತರ ಪ್ರದೇಶದ ಕೆಲವು ಕಡೆಗಳಲ್ಲಿ ನಮ್ಮ ನಾಗರೀಕರಿಗೆ, ಪ್ರಯಾಣಿಕರಿಗೆ ಎರಡು ಮೂರು